SSLC-PUC

ಶಿಕ್ಷಣ ತಜ್ಞ ರೋಹಿಡೇಕರ್ ಮಾರ್ಚ್–ಏಪ್ರಿಲ್ ತಿಂಗಳ ಅವಧಿಯನ್ನು ಪರೀಕ್ಷಾಮಾಸ ಎನ್ನುತ್ತಿದ್ದರು. ಮಾರ್ಚ್ ಬಂತೆಂದರೆ ಪರೀಕ್ಷೆಗಳ ಭರಾಟೆ ಶುರು. ರಾಜ್ಯ, ಜಿಲ್ಲೆ, ತಾಲ್ಲೂಕುಗಳ ಶೈಕ್ಷಣಿಕ ವಾತಾವರಣದಲ್ಲಿ ಹಠಾತ್ ಬದಲಾವಣೆ ಕಂಡು ಬರುತ್ತದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲಾ–ಕಾಲೇಜು ಉಪನ್ಯಾಸಕರುಗಳು ಯಶಸ್ವಿಯಾಗಿ ವಾರ್ಷಿಕ ಪರೀಕ್ಷೆ ನಡೆಸಲು ಬೇಕಾದ ಸಿದ್ಧತೆ ನಡೆಸುತ್ತಾರೆ. ರಾಜ್ಯದ ಸುಮಾರು ಒಂಬತ್ತು ಲಕ್ಷ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಮತ್ತು ಆರೂವರೆ ಲಕ್ಷ ವಿದ್ಯಾರ್ಥಿಗಳು ಪಿಯುಸಿ ಪರೀಕ್ಷೆಗೆ ಹಾಜರಾಗುವುದರಿಂದ ಈ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರತೀ ಸುದ್ದಿಯೂ ಹೆಚ್ಚು ಗಮನ ಸೆಳೆಯುತ್ತದೆ. ಈ ಪರೀಕ್ಷೆಗಳಿಂದ ಬರುವ ಫಲಿತಾಂಶದ ಪ್ರತಿಶತ ಯಶಸ್ಸಿನ ಮೇಲೆ ಆಯಾ ರಾಜ್ಯದಲ್ಲಿನ ಶಿಕ್ಷಣದ ಮಟ್ಟ ಮತ್ತು ಶೈಕ್ಷಣಿಕ ಪರಿಸರವನ್ನು ಗುರುತಿಸಲಾಗುತ್ತದೆ.

## ಕಾಡುವ ಫೋಬಿಯ

ಪರೀಕ್ಷೆ ಸಮೀಪಿಸಿದಂತೆಲ್ಲ ವಿದ್ಯಾರ್ಥಿಗಳೊಂದಿಗೆ ಪೋಷಕರೂ ಒತ್ತಡಕ್ಕೆ ಸಿಲುಕುತ್ತಾರೆ. ಒಂದು ಬಗೆಯ ಆತಂಕ, ಒತ್ತಡ ಭಯ ವಿದ್ಯಾರ್ಥಿಗಳನ್ನು ಆವರಿಸಿ ‘ಪರೀಕ್ಷಾ ಫೋಬಿಯ’ ಹರಡುತ್ತದೆ. ಪೋಷಕರು ಮಕ್ಕಳ ಓದಿಗೆ ನೆರವಾಗಲು ನಿದ್ದೆಗೆಟ್ಟು, ಆರೈಕೆ ಮಾಡಿ ಉತ್ತಮ ಅಂಕಗಳಿಸಲು ಮಾನಸಿಕ ಧೈರ್ಯ ತುಂಬುವ ಕೆಲಸ ಮಾಡುತ್ತಾರೆ. ಹೆಚ್ಚು ಪರಿಶ್ರಮ ಪಡುವ ವಿದ್ಯಾರ್ಥಿಗಳು ನೋಟ್ಸ್, ಗೈಡ್, ಸಾಲ್ವ್ಡ್ ಪೇಪರ್ಸ್, ಗ್ರೂಪ್ ಸ್ಟಡಿ, ಕೌನ್ಸೆಲಿಂಗ್ ಹೀಗೆ ವೈವಿಧ್ಯಮಯವಾಗಿ ತಯಾರಿ ನಡೆಸುತ್ತಾರೆ. ಆದರೂ ಕೆಲವೊಮ್ಮೆ ನಿರೀಕ್ಷಿತ ಫಲಿತಾಂಶ ದೊರೆಯುವುದಿಲ್ಲ. ‘ನಾನು ಚೆನ್ನಾಗಿಯೇ ಬರೆದಿದ್ದೆ, ಮಾರ್ಕ್ಸ್ ಕೊಟ್ಟಿಲ್ಲ, ಆದ್ದರಿಂದ ಫೇಲಾದೆ. ನನಗೆ ನೂರು ಬರಬೇಕಿತ್ತು, ಎಪ್ಪತ್ತು ಬಂದಿದೆ, ನಾನು ರಿವ್ಯಾಲುಯೇಶನ್‌ಗೆ ಹಾಕ್ತೀನಿ. ಕೆಲವು ಪ್ರಶ್ನೆಗಳು ತಪ್ಪಾಗಿ ಮುದ್ರಿತಗೊಂಡಿವೆ, ನಮಗೆ ಗ್ರೇಸ್ ಮಾರ್ಕ್ ಬರಬೇಕು’ – ಹೀಗೆಲ್ಲ ದೂರುವ ವಿದ್ಯಾರ್ಥಿಗಳನ್ನು ನಾವು ಕಾಣುತ್ತೇವೆ. ಇವರ ಮಾತುಗಳಲ್ಲಿ ಸತ್ಯವಿಲ್ಲವೆಂದಲ್ಲ. ಆದರೆ ನಿಜವಾದ ಸಮಸ್ಯೆ ಇರುವುದು ವಿದ್ಯಾರ್ಥಿಗಳ ಪರೀಕ್ಷಾ ತಯಾರಿಯಲ್ಲಿ, ಓದುವ–ಬರೆಯುವ ಕ್ರಮದಲ್ಲಿ ಮತ್ತು ಪರೀಕ್ಷೆಗಳನ್ನು ನಿರ್ವಹಿಸುವ ರೀತಿಯಲ್ಲಿ.

## ಪ್ರಶ್ನೆಗಳ ಮಹಾಪೂರ

ನಮ್ಮ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹೇಗೆ ತಯಾರಾಗಬೇಕು? ಯಾವೆಲ್ಲ ವಿಷಯಗಳ ಕುರಿತು ಗಮನ–ಜ್ಞಾನ ಹೊಂದಿರಬೇಕು? ಉತ್ತಮ ಅಂಕಗಳಿಸಲು ಇರುವ ಓದಿನ ಕ್ರಮಗಳೇನು? ಸೂತ್ರ, ಸಿದ್ಧಾಂತ, ವ್ಯಾಖ್ಯೆ, ಹಂತ, ಫಲಿತಾಂಶಗಳನ್ನು ನೆನಪಿಟ್ಟುಕೊಳ್ಳುವುದು ಹೇಗೆ? ಥಿಯರಿ ಮತ್ತು ಪ್ರಾಕ್ಟಿಕಲ್‌ಗಳಿಗೆ ಹೇಗೆಲ್ಲಾ ತಯಾರಾಗಬೇಕು? ಸಮಯ ನಿರ್ವಹಣೆ ಹೇಗೆ ಮಾಡಬೇಕು?




ಪ್ರಶ್ನೆಯೊಂದರ ಉತ್ತರವನ್ನು ಪೂರ್ತಿಯಾಗಿ ಹೇಗೆ ನೆನಪಿನಲ್ಲಿಟ್ಟುಕೊಳ್ಳಬೇಕು? ಕಠಿಣ ಪಾಠಗಳನ್ನು ಓದಬೇಕೆ? ಬೇಡವೆ? ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳಿಂದ ಪ್ರಶ್ನೆಗಳು ಮರುಕಳಿಸುತ್ತವೆಯೆ? ಪ್ರಶ್ನೆ ಪತ್ರಿಕೆಯ ಮಾದರಿ ಬದಲಾಗಿದೆಯೆ? ಯಾವುದಾದರೂ ಪಾಠವನ್ನು ಬಿಡಲಾಗಿದೆಯೆ? ಉತ್ತರ ಪತ್ರಿಕೆಯ ಬುಕ್‌ಲೆಟ್‌ನಲ್ಲಿ ಹಿಂದಿದ್ದಷ್ಟೇ ಹಾಳೆಗಳು ಈ ಬಾರಿ ಇರುತ್ತವೆಯೆ? ಅಡಿಷನಲ್ ಶೀಟ್‌ಗೆ ಅವಕಾಶವಿದೆಯೆ? ಪರೀಕ್ಷೆ ಶುರುವಾಗುವ ಸಮಯ ಮತ್ತು ಅವಧಿಗಳಲ್ಲೇನಾದರೂ ಬದಲಾವಣೆಗಳಾಗಿವೆಯೆ? ಎಂಬೆಲ್ಲ ವಿಷಯಗಳೂ ಈಗ ಪ್ರಮುಖವಾಗಿರುತ್ತವೆ. ವಿದ್ಯಾರ್ಥಿ–ಪೋಷಕರು ಮತ್ತು ಅಧ್ಯಾಪಕರೆಲ್ಲರೂ ಇವುಗಳ ಕುರಿತು ಸರಿಯಾದ ತಿಳುವಳಿಕೆ ಹೊಂದಿದ್ದರೆ ಮಾತ್ರ ಸುಲಭವಾಗಿ ಪರೀಕ್ಷೆಯನ್ನೆದುರಿಸಿ ಉತ್ತಮ ಅಂಕಗಳನ್ನು ಪಡೆಯಬಹುದು.

ವಸ್ತುಸ್ಥಿತಿ ಏನೆಂದರೆ, ಶೇ. 40ರಷ್ಟು ವಿದ್ಯಾರ್ಥಿಗಳು ಮಾತ್ರ ವಾರ್ಷಿಕ ಪರೀಕ್ಷೆಗಳ ಬಗ್ಗೆ ಆತ್ಮವಿಶ್ವಾಸದಿಂದಿರುತ್ತಾರೆ. ಇನ್ನುಳಿದ ಅರವತ್ತು ಜನರಿಗೆ ತಮ್ಮ ಶ್ರಮ ಮತ್ತು ತಯಾರಿಯ ಬಗ್ಗೆ ಅವರಿಗೇ ನಂಬಿಕೆಯಿರುವುದಿಲ್ಲ. ಕೆಲವರ ಬಳಿ ತಾವು ಆಯ್ಕೆಮಾಡಿಕೊಂಡಿರುವ ವಿಷಯಗಳ ಪಠ್ಯಪುಸ್ತಕಗಳೇ ಇರುವುದಿಲ್ಲ. ಇನ್ನೂ ಕೆಲವರು ಶಾಲೆ–ಕಾಲೇಜುಗಳಲ್ಲಿ ನಡೆಯುವ ಪಾಠ–ಕಿರು ಪರೀಕ್ಷೆಗಳಿಗೆ ಹಾಜರಾಗಿರುವುದಿಲ್ಲ. ಪ್ರತೀ ಬಾರಿ ಫಲಿತಾಂಶ ಬಂದು ಅದು ಕಡಿಮೆ ಎನ್ನಿಸಿದಾಗ ವರ್ಷವಿಡೀ ಕಲಿತ ಪಾಠ–ಪ್ರವಚನಗಳ ಬಗ್ಗೆ ಕೇವಲ ಮೂರು ಗಂಟೆಗಳಲ್ಲಿ ನೂರು ಅಂಕಗಳಿಗೆ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳ ಬೌದ್ಧಿಕಮಟ್ಟವನ್ನು ಅಳೆಯುವ ಕ್ರಮ ಅವೈಜ್ಞಾನಿಕ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಸರ್ಕಾರ ಪ್ರತೀ ಬಾರಿ ಸಣ್ಣ–ಪುಟ್ಟ ಬದಲಾವಣೆ ಮಾಡಿ ಸುಮ್ಮನಾಗುತ್ತದೆ. ಈ ಪರೀಕ್ಷೆಗಳಲ್ಲಿ ನಮ್ಮ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟದ ನೈಜ